# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

## ಸಿ.ಸಿ. ನಂ. 361/16

ಚಾ.ಸಾ. 45

ಫ್ರಾ.ಸಾ. 30

| | | |
|---|---|---|
| ಸಾಕ್ಷಿದಾರರ ಹೆಸರು | – | ಅಬ್ದುಲ್ ಖಾಸಿಂ ಮೂಸಾ ಖಾಸಿಂ |
| ತಂದೆಯ ಹೆಸರು | – | ಮೂಸಾ ಖಾಸಿಂ |
| ವಯಸ್ಸು | – | 37 ವರ್ಷ |
| ಉದ್ಯೋಗ | – | ಮುಖ್ಯ ಪೇದೆ |
| ವಾಸ್ತವ್ಯ | – | ಕಾರವಾರ |

(ಇಂದು ದಿನಾಂಕಃ 23-09-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ**

7 ನೇ ಆರೋಪಿಯ ಪರಿಚಯ ಇದೆ. ನಾನು ಹೈಸ್ಕೂಲ್‌ನಲ್ಲಿ ಓದುವಾಗ 7 ನೇ ಆರೋಪಿ ನಮಗೆ ಶಿಕ್ಷಕರಾಗಿದ್ದರು. ನಾನು 2002 ರಲ್ಲಿ ಪಿ.ಯು.ಸಿ.ಯನ್ನು ಮುಗಿಸಿದ್ದು ಟಿ.ಸಿ.ಹೆಚ್. ಕೋರ್ಸಗೆ ಹೋಗಬೇಕಾಗಿದ್ದು, ಸರಕಾರಿ ಸೀಟ್ ಸಿಗದೇ ಇದ್ದಾಗ ಮ್ಯಾನೇಜಮೆಂಟ್ ಸೀಟ್‌ಗೆ ಹೋಗಲು ನಿರ್ಧರಿಸಿದ್ದೆ. 7 ನೇ ಆರೋಪಿ ಸೀಟ್ ಕೊಡಿಸುವುದಾಗಿ ಹೇಳಿದ್ದಾರೆ. ಇಂಡಿ ಕಾಲೇಜಿನಲ್ಲಿ ಸೀಟ್ ಕೊಡಿಸುವುದಾಗಿ ಹೇಳಿದ್ದರು. ಬೇರೆಯವರನ್ನು ನನಗೆ ಪರಿಚಯ ಮಾಡಿಸಿಲ್ಲ. ಸದರಿ ಸೀಟ್‌ನ್ನು ಕೊಡಿಸಲು ರೂ. 40,000-00 ಖರ್ಚಾಗುತ್ತದೆ ಎಂದು ಹೇಳಿದ್ದರು. ನಾನು ರೂ. 34,000-00 ಕೊಡಿವುದಾಗಿ ಹೇಳಿ ಸದರಿ ಹಣವನ್ನು ಕೊಟ್ಟಿದ್ದೇನೆ. ನನ್ನ ಮೂಲ 10 ನೇ ತರಗತಿಯ ಅಂಕಪಟ್ಟಿ ಮತ್ತು ಪಿ.ಯು.ಸಿ. ಅಂಕಪಟ್ಟಿಗಳನ್ನು ಪಡೆದುಕೊಂಡಿದ್ದಾರೆ. ಒಂದು ತಿಂಗಳ ಒಳಗಾಗಿ ಸೀಟ್‌ನ್ನು ಕೊಡಿಸುವುದಾಗಿ ಹೇಳಿದ್ದರು. ಆಮೇಲೆ ನನಗೆ ಸೀಟ್‌ನ್ನು ಕೊಡಿಸಿಲ್ಲ ಮತ್ತು ಹಣವನ್ನು ಮರಳಿ ಕೊಟ್ಟಿಲ್ಲ. ಆದ್ದರಿಂದ ನನಗೆ ಮೋಸವಾಗಿದೆ. 7 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಹಿರಿಯ ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ**

7 ನೇ ಆರೋಪಿ, 2 ರಿಂದ 5 ನೇ ಆರೋಪಿಯರನ್ನು ಪರಿಚಯಿಸಿ ಇವರೇ ಸೀಗಟನ್ನು ಕೊಡಿಸುತ್ತಾರೆ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ನಾನು ರೂ. 38,000-00 ಗಳನ್ನು ಆರೋಪಿತರಿಗೆ ಕೊಟ್ಟಿದ್ದೇನೆ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. 7 ನೇ ಆರೋಪಿಯೊಂದಿಗೆ 2 ರಿಂದ 5 ನೇ ಆರೋಪಿತರು ಶಾಮೀಲಾಗಿ ನನಗೆ ಮೋಸ ಮಾಡಿದ್ದಾರೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 7 ನೇ ಆರೋಪಿ ಪರ ವಕೀಲರಿಂದ**

7 ನೇ ಆರೋಪಿ ನನಗೆ ಟಿ.ಸಿ.ಹೆಚ್. ಕೋರ್ಸಗೆ ಸೀಟ್ ಕೊಡಿಸುವುದಾಗಿ ಹೇಳಿ ರೂ. 34,000-00 ಗಳನ್ನು ಪಡೆದುಕೊಂಡಿಲ್ಲ ಅನ್ನುವುದು ಸರಿಯಲ್ಲ. ನಾನು ಶಾಲಾ ದಾಖಲಾತಿಗಳನ್ನು 7 ನೇ ಆರೋಪಿಗೆ ಕೊಟ್ಟಿಲ್ಲ ಅನ್ನುವುದು ಸರಿಯಲ್ಲ. ನಾನು ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದುದರಿಂದ ತನಿಖಾಧಿಕಾರಿಯವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂ. ಕಾರವಾರ